# ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್.ಸಿ ನ್ಯಾಯಾಲಯ

# ಹಿರೇಕೆರೂರು

ಸಿ ಸಿ ನಂ**: 447/2024**

ಸಿ .ಡಬ್ಲ್ಯೂ-8

**ಪಿ .ಡಬ್ಲ್ಯೂ-6**

| | | |
|---|---|---|
| ಹೆಸರು | : | ಪರಮೇಶ್ವರಪ್ಪ |
| ತಂದೆ ಹೆಸರು | : | ಕನ್ನಪ್ಪ ಯಲವದಹಳ್ಳಿ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ಪೋಲಿಸ ಮುಖ್ಯ ಪೇದೆ |
| ವಾಸ ಸ್ಥಳ | : | ಹಂಸಭಾವಿ |

**ಇಂದು ದಿಃ 06-07-**2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ-**

ನಾನು 2019 ರಿಂದ 2025 ರವರೆಗೆ ಹಿರೇಕೆರೂರು ಪೊಲೀಸ್ ಠಾಣೆಯಲ್ಲಿ ಪೋಲಿಸ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

2. ದಿಃ 09-04-2024 ರಂದು ಮಧ್ಯಾಹ್ನ 1-00 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಶ್ರೀಮತಿ ಇಂದ್ರಮ್ಮ ಕೋಂ ಶಿವಾನಂದಪ್ಪ ಬಣಕಾರ ಸಾಃ ಹಿರೇಯಡಚಿ ಅವರು ಸಲ್ಲಿಸಿದ ಲಿಖಿತ ದೂರನ್ನು ಸ್ವೀಕರಿಸಿ ಅದನ್ನು ನಮ್ಮ ಠಾಣಾ ಪ್ರಕರಣ ಸಂಃ 68/2024 ಎಂದು ದಾಖಲಿಸಿ ಪ್ರ. ವ. ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿದ್ದೇನೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ, ಸಾಕ್ಷಿಗೆ ತೋರಿಸಿದ ದೂರನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು, ಅವರ ಸಹಿಯನ್ನು **ನಿಪಿ-1(ಬಿ)** ಎಂದು ಗುರುತಿಸಲಾಯಿತು. ಪ್ರ. ವ. ವರದಿಯನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು **ನಿಪಿ-6(ಎ)** ಎಂದು ಗುರುತಿಸಲಾಯಿತು.

3. ದಿಃ 10-04-2024 ರಂದು ಬೆಳಿಗ್ಗೆ 11-30 ಗಂಟೆಗೆ ಪಂಚರಾದ ಬಸವಂತಪ್ಪ ಹಾಗೂ ಸಿದ್ದಪ್ಪ ಚಾಸಾ-2 ಮತ್ತು 3 ರವರನ್ನು ಹಾಜರುಪಡಿಸಿಕೊಂಡು ಘಟನಾ ಸ್ಥಳದಲ್ಲಿ ಬೆಳಿಗ್ಗೆ 11-30 ರಿಂದ ಮಧ್ಯಾಹ್ನ 12-30 ರವರೆಗೆ ಪಿರ್ಯಾದಿ ತೋರಿಸಿದ ಘಟನಾ ಸ್ಥಳದಲ್ಲಿ ಪಂಚನಾಮೆ ಮಾಡಿದ್ದೇನೆ.

ಸಿ .ಡಬ್ಲ್ಯೂ-8

**ಪಿ .ಡಬ್ಲ್ಯೂ-6**

ಆ ಸಮಯದಲ್ಲಿ ಒಂದು ಹಿಡಿ ಗಾತ್ರದ ಬಡಿಗೆಯನ್ನು ಪಿರ್ಯಾದಿ ಹಾಗೂ ಪಂಚರ ಸಮಕ್ಷಮ ವಶಪಡಿಸಿಕೊಂಡಿದ್ದೇನೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ತೋರಿಸಿದ ಸ್ಥಳ ಪಂಚನಾಮೆಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು, ಅವರ ಸಹಿಯನ್ನು **ನಿಪಿ-2(ಡಿ)** ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಫೋಟೋ ತೆಗೆದಿದ್ದೆ. ಸಾಕ್ಷಿ ತೋರಿಸಿದ ಫೋಟೊಗಳನ್ನು ಈಗಾಗಲೇ ನಿಪಿ-3 ಮತ್ತು 4 ಎಂದು ಹಾಗೂ ಬಡಿಗೆಯನ್ನು ಮುದ್ದೆ ಮಾಲು -1 ಎಂದು ಗುರುತಿಸಲಾಗಿದೆ.

3. ಅದೇ ದಿನ ನ್ಯಾಯಾಲಯಕ್ಕೆ ಸ್ವತ್ತಿನ ಪಟ್ಟಿಯನ್ನು ಪಂಚನಾಮೆಯನ್ನು ಹಾಜರು ಪಡಿಸಿದ್ದೇನೆ. ಆ ನಂತರ ಪಿರ್ಯಾದಿ ಮತ್ತು ಗಾಯಾಳು ಅವರ ಹೇಳಿಕೆಗಳನ್ನು ಪಡೆದಿದ್ದೇನೆ. ಸಾಕ್ಷಿದಾರರಾದ ಚಾಸಾ-5 ಮತ್ತು 6 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ. ಆರೋಪಿಗಳಿಗೆ ಠಾಣೆಗೆ ಹಾಜರಾಗುವಂತೆ ನೋಟಿಸ್ ನೀಡಿದ್ದೇನೆ. ಅವರನ್ನು ಬಂಧಿಸಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದೇನೆ.

4. ನಂತರ ಗಾಯಾಳುವಿನ ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದೇನೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ತೋರಿಸಿದ ಗಾಯದ ಪ್ರಮಾಣ ಪತ್ರವನ್ನು ಈಗಾಗಲೇ ನಿಪಿ-5 ಎಂದು ಗುರುತಿಸಿದ್ದು, ಅವರ ಸಹಿಯನ್ನು **ನಿಪಿ-5(ಬಿ)** ಎಂದು ಗುರುತಿಸಲಾಯಿತು. ಅದೇ ದಿನ ಪಿರ್ಯಾದಿಯ ಮರು ಹೇಳಿಕೆ ಪಡೆದಿದ್ದೇನೆ.

5. ತನಿಖೆ ಪೂರ್ತಿಗೊಳಿಸಿ ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ. ಆರೋಪಿಗಳನ್ನು ಗುರುತಿಸುತ್ತೇನೆ, ಅವರು ನ್ಯಾಯಾಲಯದ ಮುಂದೆ ಇದ್ದಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎನ್. ಎಸ್. ಹೆಚ್. ವಕೀಲರಿಂದಃ**

ದೂರನ್ನು ಕೊಡಲು ಪಿರ್ಯಾದಿ ಮಾತ್ರ ಬಂದಿದ್ದರು. ದೂರನ್ನು ನೀಡಿದ ದಿನ ಘಟನಾ ಸ್ಥಳಕ್ಕೆ ಹೋಗಿಲ್ಲ. ದಿಃ 10-04-2024 ರಂದು ಪಂಚನಾಮೆ ಮಾಡಲು ಹೋದಾಗ ಪಂಚರನ್ನು ನಾನೇ ಕರೆಸಿದ್ದೆ. ಆ ಸಮಯದಲ್ಲಿ ನನ್ನ ಸಹಾಯಕರು ತೆಗೆದಿದ್ದಾರೆ. ಪಂಚನಾಮೆಯನ್ನು ನಾನೇ ಬೆರಳಚ್ಚು ಮಾಡಿದ್ದೇನೆ. ನಾನು ಆ ದಿನ ಘಟನಾ ಸ್ಥಳಕ್ಕೆ ಹೋಗದೆ ಪೋಲಿಸ್ ಠಾಣೆಯಲ್ಲಿ ಕುಳಿತು ನಿಪಿ-2 ಪಂಚನಾಮೆಯನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಮುದ್ದೆ ಮಾಲು -1 ರಂತಹ ಬಡಿಗೆಗಳು ರೈತರ ಮನೆಯಲ್ಲಿ ಸಿಗುತ್ತವೆಂದರೆ ಸರಿ. ಘಟನಾ ಸ್ಥಳ ಪಂಚನಾಮೆಗೆ ಹೋದಾಗ ಪಿರ್ಯಾದಿ ಮತ್ತು ಪಂಚರನ್ನು ಹೊರತುಪಡಿಸಿ ಸಾಕ್ಷಿದಾರರನ್ನು ಠಾಣೆಗೆ ಕರೆದುಕೊಂಡು ಬಂದು ಹೇಳಿಕೆಗಳನ್ನು ಪಡೆದಿದ್ದೇನೆ. ನಾನು ಸಾಕ್ಷಿದಾರರನ್ನು ಠಾಣೆಗೆ ಕರೆಸಿಲ್ಲ, ಅವರ ಹೇಳಿಕೆಗಳನ್ನು ಪಡೆದಿಲ್ಲವೆಂದರೆ ಸರಿಯಲ್ಲ.

ಸಿ .ಡಬ್ಲ್ಯೂ–8

**ಪಿ .ಡಬ್ಲ್ಯೂ–6**

2. ನನ್ನ ತನಿಖೆಯ ಕಾಲದಲ್ಲಿ ಪಿರ್ಯಾದಿ ಮತ್ತು ಆರೋಪಿಗಳ ನಡುವೆ ಸಿವಿಲ್ ವ್ಯಾಜ್ಯವಿದೆ ಎಂದು ತಿಳಿದುಕೊಂಡಿದ್ದೇನೆ. ಪಿರ್ಯಾದಿದಾರಳಿಗೆ ಅನುಕೂಲವಾಗಲೆಂದು ಪಿರ್ಯಾದಿ ನೀಡಿದ ಸುಳ್ಳು ದೂರನ್ನು ಸ್ವೀಕರಿಸಿ, ಆರೋಪಿಗಳ ವಿರುದ್ಧ ಸುಳ್ಳು ದೋಷಾರೋಪಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲಿಗೂ ಆರೋಪಿಗಳಿಗೂ ಯಾವುದೇ ರೀತಿಯ ಸಂಬಂಧ ಇಲ್ಲವೆಂದರೆ ಸರಿಯಲ್ಲ. ಪಿರ್ಯಾದಿಗೆ ಯಾವುದೇ ಗಾಯಗಳು ಆಗದಿದ್ದರೂ ಸಹ ಅವರಿಗೆ ಅನುಕೂಲವಾಗಲೆಂದು ಸುಳ್ಳು ಗಾಯದ ಪ್ರಮಾಣ ಪತ್ರ ತರಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆಯದೇ, ಪಿರ್ಯಾದಿಯ ಮರುಹೇಳಿಕೆ ಪಡೆಯದೇ ಆರೋಪಿಗಳ ವಿರುದ್ಧ ಸುಳ್ಳು ದೋಷಾರೋಪಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ಸಹಿ/–

ದಿನಾಂಕಃ 06–07–2026 ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,ಹಿರೇಕೆರೂರು